# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,  ನಂಜನಗೂಡು.

**ಸಿ.ಸಿ 604-2021** **ಸಿ. ಡಬ್ಲ್ಯೂಃ 01**

**ಪಿ ಡಬ್ಲ್ಯೂಃ 01**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ಗಂಡನಹೆಸರು<br>ವಯಸ್ಸು<br>ಉದ್ಯೋಗ<br>ವಾಸ | ಮಧುಕೇಶ್ವರ ಹೆಚ್.ಎಂ<br>ಮಲ್ಲು ಹೆಚ್.ಎಂ<br>40 ವರ್ಷ<br>ಅಬಕಾರಿ ಉಪನಿರೀಕ್ಷಕರು, ಚಾಮರಾಜನಗರ  ವಲಯ<br>ಚಾಮರಾಜನಗರ |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 17-06-2026** |

**<u>ಮುಖ್ಯ ವಿಚಾರಣೆಃ  ಶ್ರೀ  ಎಪಿಪಿ   ವಕೀಲರಿಂದಃ</u>**

ನಾನು 2017 ರಿಂದ  ನವಂಬರ್ 2025 ವರೆಗೆ ನಾನು ನಂಜನಗೂಡು ಅಬಕಾರಿ ನೀರಿಕ್ಷಕರ ಕಚೇರಿಯಲ್ಲಿ ಅಬಕಾರಿ ರಕ್ಷಕರಾಗಿ  ಕರ್ತವ್ಯ ನಿರ್ವಹಹಿಸುತ್ತಿದ್ದೆನೆ.

ದಿ.27-02-2020 ರಂದು ನಾನು ಚಾಸಾ- 2 ರಿಂದ 5 ಮತ್ತು 7 ರವರೊಂದಿಗೆ ನಂಜನಗೂುಡ ತಾಲ್ಲೂಎ ಎಲಚಗೆರಗೆ ಗ್ರಾಮದಿಂದ  ಕಸುವಿನ ಹಳ್ಳಿಗೆ ಹೋಗುವ ಮುಖ್ಯ ರಸ್ತೆಯಲ್ಲಿ ಗಸ್ತು ನಡೆಸುತ್ತಿರು ಸಂದರ್ಭದಲ್ಲಿ  ಎಲಚಗೆರೆ ಗ್ರಾಮದ ನಾಗರಾಜು ಎಂಬುವವರ ತೋಟದಲ್ಲಿ ಇರುವ ಯಂತ್ರದ ಮನೆಯಲ್ಲಿ ಅಕ್ರಮವಾಗಿ ಸೇಂದಿಯನ್ನು ಹೊಂದಿ ಮಾರಾಟ ಮಾಡುತ್ತಿರುವುದಾಗಿ ಬಂದಾ ಮಾಹಿತಿ ಮೇರೆಗೆ ನಾವು ನಾಗರಾಜುರವರ ತೋಟಕೆಕ ತೆರಳಿದಾಗ ತೋಟದಲಿಲ

ಇರುವ ಯಂತ್ರದ ಮನೆಯ ಸುತ್ತ ಮೂರು ನಾಲ್ಕು ಮಂದಿ ಪ್ಲಾಸ್ಟಿಕ್ ಜಗ್ ನಲ್ಲಿ ಏನನ್ನು ಕುಡಿಯುತ್ತಾ ಕುಳಿತಿರುವುದು ಕಂಡು ಬಂತು ಅವರುಗಳು ಸಮವಸ್ತ್ರ ದಾರಿಗಳಾದ ನಮ್ಮನ್ನು ಕಂಡು ಪರಾರಿ ಆದರು. ನಂತರ ನಾವು ಯತ್ರದ ಮನೆಗೆ ತೆರಳಿದಾಗ ಅಲ್ಲಿ ಒಬ್ಬ ಆಸಾಮಿ ಪ್ಲಾಸ್ಟಿಕ್ ಕ್ಯಾನ್ ಮತ್ತು ಜಗ್ ಗಳನ್ನು ಇಟ್ಟುಕೊಂಡು ಕುಳಿತಿದ್ದು ಸಮವಸ್ತ್ರ ದಾರಿಗಳಾದ ನಮ್ಮನ್ನು ಕಂಡು ಗಾಬರಿ ಆದನು. ನಂತರ ಯಂತ್ರದ ಮನೆಯನ್ನು ಪರಿಶೀಲನೆ ಮಾಡಲು ಸ್ವತಂತ್ರ ಸಾಕ್ಷಿದಾರರು ಯಾರು ಇಲ್ಲದೇ ಇರುವ ಕಾರಣ ಇಲಾಖಾ ಸಿಬ್ಬಂದಿಗಳನ್ನೇ ಪಂಚರರನ್ನಾಗಿಸಿಕೊಂಡು ಮಾನ್ಯ ಘನ ನ್ಯಾಯಾಲಯದಿಂದ ಶೋಧನಾ ವಾರೆಂಟ್ ತರಲು ಸಾಕಷ್ಟು ಸಮಯ ಇಲ್ಲದೇ ಇರುವ ಕಾರಣ ಮತ್ತು ವಿಳಂಬವಾದರೆ ಆರೋಪಿಯು ಸಾಕ್ಷಿಗಳನ್ನು ನಾಶ ಪಡಿಸುವ ಸಂಬವ ಇರುವುದರಿಂದ ಸ್ಥಳದಲ್ಲಿಯೇ ಶೊಧನಾ ವಾರೆಂಟ್ ತಯಾರಿಸಿ ಯಂತ್ರದ ಮನೆಯನ್ನು ಪರಿಶೀಲನೆ ಮಾಡಿದಾಗ ಅಲ್ಲಿ 35 ಲೀಟರ್ ಸಾಮರ್ಥ್ಯದ ಒಂದು ಪ್ಲಾಸ್ಟಿಕ್ ಕ್ಯಾನ್ ನಲ್ಲಿ ಸುಮಾರು 25 ಲೀಟರ್ ನಷ್ಟು ಸೇಂದಿ ಮತ್ತು 10 ಲೀಟರ್ ಸಾಮರ್ಥ್ಯದ ಒಂದು ಹಸಿರುವ ಬಿಂದಿಗೆಯಲ್ಲಿ ನಲ್ಲಿ ಸುಮಾರು 10 ಲೀಟರ್ ನಷ್ಟು ಸೇಂದಿ ಒಟ್ಟು 35 ಲೀಟರ್ ಸೇಂದಿ ಕಂಡು ಬಂತು ಮತ್ತು ನಾಲ್ಕು ಪ್ಲಾಸ್ಟಿಕ್ ಜಗ್ಗು ಮತ್ತು ಸೇಂದಿ ಉತಾರು ಮಾಡಲು ಬಳಸುವ ಕುಡುಗೋಲು ಮತ್ತು ಹೊಂಬಾಳೇ ಬುಟ್ಟಿ ಇರುವುದು ಕಂಡು ಬಂದಿತು. ನಂತರ ಹಾಜರಿದ್ದ ಆಸಾಮಿಯನ್ನು ಇಷ್ಟು ಪ್ರಮಾಣ ದ ಸೇಂದಿಯನ್ನು ಏಕೆ ಹೊಂದಿರುವ ಎಂದು ಕೇಳಿದಾಗ ಆತನು ಮಾರಟ ಮಾಡುವ ಉದ್ದೇಶದಿಂದ ಹೊಂದಿರುವುದಾಗಿ ತಿಳಿಸಿದನು. ಈ ರೀತಿ ಸೇಂದಿಯನ್ನು ಹೊಂದಿರಲು ತಮ್ಮ ಬಳಿ ಯಾವುದಾದರೂ ಪರವಾನಿಗೆ ಇದೆಯೇ ಎಂದು ಕೇಳಲಾಗಿ ಆತರ ಯಾವುದೇ ಪರವಾನಿಗೆ ಇಲ್ಲ ಎಂದು ತಿಳಿಸಿದನು. ನಂತರ ಆತನ ಹೆಸರ ವಿಳಾಸ ಕೇಳಲಾಗಿ ಆತನು ಹೆಸರು ಮಂಜುನಾಥ ಬಿನ್ ವೆಂಕಟಸ್ವಾಮಿ , ಯಲಚಗೆರೆ ಕಾಲೋನಿ ಗಾಮ,

ನಂಜನಗೂಡು ತಾಲ್ಲೂಕು ಎಂದು ತಿಳಿಸಿದನು. ಈ ರೀತಿ ಸೇಂದ್ರಿಯನ್ನು ಅಕ್ರಮವಾಗಿ ಹೊಂದಿ ಮಾರಾಟ ಮಾಡುವುದು ಕರ್ನಾಟಕ ಅಬಕಾರಿ ಖಾಯಿದೆ 1965 ರೀತ್ಯಾ ಶಿಕ್ಷಾರ್ಯ ಅಪರಾಧ ಎಂದು ಆತನಿಗೆ ತಿಳಿಸಿ ಸೇಂದಿ ದೊರತೆ ಪ್ಲಾಸ್ಟಿಕ್ ಕ್ಯಾನ್ ಮತ್ತು ಪ್ಲಾಸ್ಟಿಕ್ ಬಿಂದಿಗೆಯಿಂದ ತಲಾ 1 ಲೀಟರ್ ಸೇಂದಿಯನ್ನು ಎರಡು ಪ್ಲಾಸ್ಟಿಕ್ ಬಾಟಲ್ ಗಳಲ್ಲಿ ಪ್ರತ್ಯೇಕವಾಗಿ ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದು ಪ್ಲಾಸ್ಟಿಕ್ ಬಾಟಲ್ ಗಳನ್ನು ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಹರಗು ಹಾಕಿ ಇಲಾಖಾ ಸೀಲ್ ನಿಂದ ಸೀಲು ಮಾಡಲಾಯಿತು. ಸಣ್ಣ ಚೀಟಿಯಲ್ಲಿ ಮೊಕದ್ದಮೆ ವಿವರ ಬರೆದು, ನಾವುಗಳು ಸಹಿ ಮಾಡಿ ಮಾದರಿ ತೆಗೆದ ಪ್ಲಾಸ್ಟಿಕ್ ಬಾಟಲ್ ಗಳಿಗೆ ಅಂಟಿಸಲಾಯಿತು. ಮತ್ತು ಮಾದರಿ ಸೀಲಿನ ನಕಲನ್ನು ತಯಾರಿಸಲಾಯಿತು. ನಂತರ ದೊರೆತ ಸೇಂದಿ ಮತ್ತು ಆರೋಪಿಯನ್ನು ಇಲಾಖಾ ವಶಕ್ಕೆ ಪಡೆಯಲಾಯಿತು. ಘಟನಾ ಸ್ಥಳದಲ್ಲಿ ಮಹಜರು ಕ್ರಮವನ್ನು ಚಾಸಾ-7 ರವರ ಉಕ್ತಲೇಖನದ ಮೇರೆಗೆ ಬರೆದಿರುತ್ತೇನೆ. ನಾನು ಬೆಳಗ್ಗೆ 9-05 ರಿಂದ 10-00 ಗಂಟೆಯವರೆಗೂ ಚಾಸಾ-2 ರಿಂದ 5 ಮತ್ತು 7 ರವರ ಸಮಕ್ಷಮ ಜರುಗಿಸಲಾಯಿತು. ನಾನು ನನ್ನ ಮೇಲಾಧಿಕಾರಿಗಳ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

ಸಾಕ್ಷಿಗೆ ಈಗ ಒಂದು ದಾಖಲೆ ತೋರಿಸಿದ್ದು ಅದು ಸ್ಥಳ ಮಹಜರ್ ಆಗಿದ್ದು ಸಾಕ್ಷಿ ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಶೋಧನಾ ಸಮುಚ್ಚಿತ್ತ ವಾರೆಂಟ್ ನೋಡಿ ಗುರುತಿಸಿದ್ದು ಅದನ್ನು ನಿಪಿ–2 ಎಂದು, ಸಾಕ್ಷಿ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಯು ಮಾದರಿ ಸೀಲಿನ ನಕಲನ್ನು ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಎಂದು, ಸಾಕ್ಷಿ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು.

ನ್ಯಾಯಾಲಯದ ಮುಂದೆ ಇರುವ ಮು ಮಾಲುಗಳನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ–1 ಮತ್ತು 2 ಎಂದು, ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**